**International Journal of Academic Research** P-ISSN: 2348-7666: Impact Factor: 7.215
Homepage: https://www.ijar.org.in/
Volume-13, Issue-3, July-Sep-2026
This work is licensed under a Creative Commons Attribution 4.0 International License [CC BY 4.0]

**Research Article**

# ಕುವೆಂಪು ಅವರ “ಸಾಲದ ಮಗು” ಕಥೆಯಲ್ಲಿ ಸಾಮಾಜಿಕ ಶೋಷಣೆ ಮತ್ತು ಮಾನವೀಯ ಮೌಲ್ಯಗಳ ಸಂಘರ್ಷ

**ಡಾ. ಕೃಷ್ಣಪ್ಪ ಕೆ.ಎನ್.**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ – ೫೬೨೧೦೧.

**ಸಾರಲೇಖ:**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಕಥಾಸಾಹಿತ್ಯವು ಸಾಮಾಜಿಕ ವಾಸ್ತವವನ್ನು ಮಾನವೀಯ ನೆಲೆಯಲ್ಲಿ ಗ್ರಹಿಸುವ ವಿಶಿಷ್ಟ ಸಾಮರ್ಥ್ಯವನ್ನು ಹೊಂದಿದೆ. ಅವರ ಅವರ ಕಥಾಸಾಹಿತ್ಯವು ಮಲೆನಾಡಿನ ಪರಿಸರ, ಗ್ರಾಮೀಣ ಬದುಕು, ಸಾಮಾಜಿಕ ಅಸಮಾನತೆ, ಬಡತನ, ಶೋಷಣೆ, ಜಾತಿ ವ್ಯವಸ್ಥೆ ಮತ್ತು ಮಾನವೀಯ ಸಂಬಂಧಗಳ ಸೂಕ್ಷ್ಮ ಚಿತ್ರಣದಿಂದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅವರ “ಸಾಲದ ಮಗು” ಕಥೆಯು ಮೇಲ್ನೋಟಕ್ಕೆ ಒಬ್ಬ ಅನಾಥ ಬಾಲಕನ ದಾರುಣ ಸಾವಿನ ಕಥೆಯಾಗಿ ಕಂಡರೂ ಅದರ ಆಂತರ್ಯದಲ್ಲಿ ಗ್ರಾಮೀಣ ಜಿಜಣಜಚಿಟ ವ್ಯವಸ್ಥೆ, ಸಾಲದ ಶೋಷಣೆ, ಬಾಲಕಾರ್ಮಿಕತೆ, ಬಡತನ, ಅಧಿಕಾರದ ದರ್ಪ ಮತ್ತು ಮಾನವೀಯತೆಯ ಅಧಃಪತನದಂತಹ ಗಂಭೀರ ಸಾಮಾಜಿಕ ಪ್ರಶ್ನೆಗಳು ಅಡಕವಾಗಿವೆ. ರಂಗನ ಸಾಲದ ಬಾಧ್ಯತೆ ಅವನ ಮರಣದ ನಂತರ ಅವನ ಮಗ ಸುಬ್ಬನ ಬದುಕಿನ ಮೇಲೆಯೇ ಹೇರಲ್ಪಡುವುದು ಕಥೆಯ ಕೇಂದ್ರ ಸಂಘರ್ಷವಾಗಿದೆ. ತಂದೆಯ ಸಾಲ ತೀರಿಸುವ ಸಾಧನವಾಗಿ ಮಗುವನ್ನು ಪರಿಗಣಿಸುವ ಗೌಡರ ಮನೋಭಾವವು ಮನುಷ್ಯನ ಮೌಲ್ಯವನ್ನು ಹಣದ ಮೌಲ್ಯಕ್ಕೆ ಇಳಿಸುವ ಶೋಷಣಾತ್ಮಕ ವ್ಯವಸ್ಥೆಯ ಪ್ರತೀಕವಾಗಿದೆ.

ಕಥೆಯ ಆರಂಭದಲ್ಲಿಯೇ ಕುವೆಂಪು ಅವರು ಮಲೆನಾಡಿನ ಕಾರ್ಗತ್ತಲೆ, ಮಳೆ, ಗಾಳಿ, ಸಿಡಿಲು, ಗುಡುಗು ಮತ್ತು ಅರಣ್ಯದ ಭೀಕರತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಈ ಪ್ರಕೃತಿ ಚಿತ್ರಣವು ಕೇವಲ ಹಿನ್ನೆಲೆಯಲ್ಲ; ಅದು ಸುಬ್ಬನ ಬದುಕಿನ ದುರಂತಕ್ಕೆ ಸಂಕೇತಾತ್ಮಕ ವಾತಾವರಣವನ್ನು ನಿರ್ಮಿಸುತ್ತದೆ. ಒಂದು ಕಡೆ ಹೊರಗೆ ಪ್ರಕೃತಿಯ ರೌದ್ರರೂಪವಿದ್ದರೆ ಮತ್ತೊಂದು ಕಡೆ ಮನೆಯೊಳಗೆ ಗೌಡರ ಅಧಿಕಾರದ ರೌದ್ರರೂಪವಿದೆ. ಪ್ರಕೃತಿಯ ಕ್ರೌರ್ಯಕ್ಕಿಂತಲೂ ಮನುಷ್ಯನ ಕ್ರೌರ್ಯವೇ ಹೆಚ್ಚು ಭಯಾನಕ ಎಂಬ ಅರಿವು ಕಥೆಯ ಅಂತ್ಯದಲ್ಲಿ ಗಾಢವಾಗುತ್ತದೆ. “ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು!” ಎಂಬ ಗೌಡರ ಕೊನೆಯ ಮಾತು ಕಥೆಯ ಸಂಪೂರ್ಣ ಮಾನವೀಯ ದುರಂತವನ್ನು ಒಂದೇ ವಾಕ್ಯದಲ್ಲಿ ಸಾಂದ್ರಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ “ಸಾಲದ ಮಗು” ಕಥೆಯನ್ನು ಸಾಮಾಜಿಕ ವಾಸ್ತವವಾದಿ ಹಾಗೂ ಮಾನವತಾವಾದಿ ದೃಷ್ಟಿಕೋನದಿಂದ ವಿಶ್ಲೇಷಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ಪ್ರಮುಖ ಪದಗಳು:** ಕುವೆಂಪು, ಸಾಲದ ಮಗು, ಸಾಲದ ಶೋಷಣೆ, ಬಾಲಕಾರ್ಮಿಕತೆ, ಜೀತಪದ್ಧತಿ, ಸಾಮಾಜಿಕ ವಾಸ್ತವ, ವರ್ಗ ಅಸಮಾನತೆ, ಮಾನವೀಯತೆ, ಧಾರ್ಮಿಕ ಕಪಟ, ಗ್ರಾಮೀಣ ಬದುಕು.

**ಪ್ರಸ್ತಾವನೆ:**

ಕನ್ನಡದ ಆಧುನಿಕ ಸಾಹಿತ್ಯದ ಬೆಳವಣಿಗೆಯಲ್ಲಿ ಕುವೆಂಪು ಅವರ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಕುವೆಂಪು ಅವರು ಕೇವಲ ಕವಿ ಅಥವಾ ಕಾದಂಬರಿಕಾರರಾಗಿ ಮಾತ್ರವಲ್ಲದೆ ಮಾನವೀಯ ಮೌಲ್ಯಗಳನ್ನು ಕೇಂದ್ರದಲ್ಲಿರಿಸಿಕೊಂಡ

ಸೃಜನಶೀಲ ಸಾಹಿತಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಸಾಹಿತ್ಯದಲ್ಲಿ ಪ್ರಕೃತಿ ಮತ್ತು ಮನುಷ್ಯನ ಸಂಬಂಧದ ಜೊತೆಗೆ ಸಾಮಾಜಿಕ ಅಸಮಾನತೆ, ಶೋಷಣೆ, ಬಡತನ, ಜಾತಿ ವ್ಯವಸ್ಥೆ, ಮೂಢನಂಬಿಕೆ ಮತ್ತು ಅಧಿಕಾರದ ದುರುಪಯೋಗದಂತಹ ವಿಚಾರಗಳೂ ವ್ಯಕ್ತವಾಗುತ್ತವೆ. ವಿಶೇಷವಾಗಿ ಗ್ರಾಮೀಣ ಬದುಕಿನ ಚಿತ್ರಣಗಳಲ್ಲಿ ಅವರು ಸಾಮಾನ್ಯ ಜನರ ಸಂಕಟಗಳನ್ನು ಕೇವಲ ಸಹಾನುಭೂತಿಯಿಂದ ನೋಡದೆ ಅವುಗಳ ಸಾಮಾಜಿಕ ಕಾರಣಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತಾರೆ.

"ಸಾಲದ ಮಗು" ಕಥೆಯು ಇದೇ ಸಾಮಾಜಿಕ ದೃಷ್ಟಿಯ ಪ್ರಮುಖ ಉದಾಹರಣೆಯಾಗಿದೆ. ಕಥೆಯ ಕೇಂದ್ರದಲ್ಲಿ ಎಂಟು–ಹತ್ತು ವರ್ಷದ ಸುಬ್ಬ ಎಂಬ ಅನಾಥ ಬಾಲಕನಿದ್ದಾನೆ. ಅವನ ತಂದೆ ರಂಗನು ಗೌಡರ ಒಕ್ಕಲಾಗಿದ್ದು, ಗೌಡರಿಂದ ಪಡೆದ ಸಾಲವನ್ನು ತೀರಿಸಲಾಗದೆ ಬದುಕಿನಿಂದ ನಿರ್ಗಮಿಸುತ್ತಾನೆ. ತಂದೆಯ ಸಾಲದ ಹೊರೆ ಮಗನ ಮೇಲೆ ಬೀಳುತ್ತದೆ. ಇಲ್ಲಿ "ಸಾಲ" ಎನ್ನುವುದು ಕೇವಲ ಹಣಕಾಸಿನ ವ್ಯವಹಾರವಲ್ಲ. ಅದು ಒಂದು ಸಾಮಾಜಿಕ ಸಂಬಂಧವನ್ನು ರೂಪಿಸುವ ಶೋಷಣೆಯ ಸಾಧನವಾಗುತ್ತದೆ. ಸಾಲಗಾರ ಮತ್ತು ಸಾಲಕೊಡುವವನ ನಡುವಿನ ಆರ್ಥಿಕ ಸಂಬಂಧವು ಕ್ರಮೇಣ ಯಜಮಾನ–ಜೀತದಾಳು ಸಂಬಂಧವಾಗಿ ಪರಿವರ್ತಿತವಾಗುತ್ತದೆ.

ಈ ಕಥೆಯಲ್ಲಿ ಸುಬ್ಬನ ವೈಯಕ್ತಿಕ ದುರಂತದ ಮೂಲಕ ಒಂದು ಸಮಗ್ರ ಗ್ರಾಮೀಣ ಸಾಮಾಜಿಕ ವ್ಯವಸ್ಥೆಯ ದುರಂತವನ್ನು ಕುವೆಂಪು ಚಿತ್ರಿಸಿದ್ದಾರೆ. ಸುಬ್ಬನು ತನ್ನ ತಂದೆಯ ಸಾಲವನ್ನು ತೀರಿಸುವ ವ್ಯಕ್ತಿಯಲ್ಲ; ಅವನನ್ನೇ ಸಾಲದ ರೂಪದಲ್ಲಿ ಪರಿಗಣಿಸಲಾಗುತ್ತದೆ. ಹೀಗಾಗಿ ಕಥೆಯ ಶೀರ್ಷಿಕೆಯಾದ "ಸಾಲದ ಮಗು" ಅತ್ಯಂತ ಅರ್ಥಪೂರ್ಣವಾಗಿದೆ. ಮಗುವೊಂದು ಸಾಲದ ಕಾರಣದಿಂದ ಜೀತದಾಳಾಗುವುದು ಮತ್ತು ಕೊನೆಯಲ್ಲಿ ಅದರ ಮರಣವನ್ನೇ ಸಾಲದ ವಸೂಲಿಯಂತೆ ನೋಡುವ ಮನೋಭಾವವು ಕಥೆಯ ಶೋಷಣಾತ್ಮಕ ಸಾಮಾಜಿಕ ವಾಸ್ತವವನ್ನು ಅನಾವರಣಗೊಳಿಸುತ್ತದೆ.

ಕಥೆಯ ಆರಂಭವೇ ಮಲೆನಾಡಿನ ಭೀಕರ ಮಳೆಗಾಲದ ವಾತಾವರಣದ ಮೂಲಕವಾಗುತ್ತದೆ. "ಮಳೆಗಾಲ. ಕಾರಿರುಳು. ಕತ್ತಲು ಹೆಪ್ಪುಗಟ್ಟಿಕೊಂಡಿತ್ತು" ಎಂಬ ಆರಂಭಿಕ ಚಿತ್ರಣ ಕಥೆಯ ಮುಂದಿನ ದುರಂತಕ್ಕೆ ವಾತಾವರಣಾತ್ಮಕ ಮುನ್ನುಡಿಯಾಗುತ್ತದೆ. ಮಳೆ, ಗಾಳಿ, ಕತ್ತಲೆ, ಸಿಡಿಲು, ಗುಡುಗು ಮತ್ತು ಪ್ರವಾಹಗಳ ಮೂಲಕ ಪ್ರಕೃತಿಯ ಉಗ್ರ ಸ್ವರೂಪವನ್ನು ಚಿತ್ರಿಸಿರುವ ಕುವೆಂಪು, ಇದೇ ಸಂದರ್ಭದಲ್ಲಿ ಮನುಷ್ಯ ಸಮಾಜದಲ್ಲಿರುವ ಕ್ರೌರ್ಯವನ್ನೂ ಓದುಗರ ಮುಂದಿಡುತ್ತಾರೆ. ಹೊರಗಿನ ಪ್ರಕೃತಿ ಹೇಗೆ ಉಗ್ರವಾಗಿದೆಯೋ ಹಾಗೆಯೇ ಕಥೆಯ ಗೌಡನ ಮನಸ್ಸೂ ಕಠೋರವಾಗಿದೆ. ಹೀಗಾಗಿ ಪ್ರಕೃತಿಯ ರುದ್ರತೆ ಮತ್ತು ಮನುಷ್ಯನ ಕ್ರೌರ್ಯ ಪರಸ್ಪರ ಪ್ರತಿಧ್ವನಿಸುವಂತೆ ಕಥೆಯಲ್ಲಿ ವಿನ್ಯಾಸಗೊಂಡಿವೆ.

ಕಥೆಯ ಪ್ರಮುಖ ಪಾತ್ರ ಗೌಡ. ಆತ ಗ್ರಾಮದ ಶ್ರೀಮಂತ ಮತ್ತು ಪ್ರಭಾವಿ ವ್ಯಕ್ತಿ. ಅನೇಕ ಮನೆತನಗಳಿಗೆ ಹೆಚ್ಚಿನ ಬಡ್ಡಿಯಲ್ಲಿ ಸಾಲ ನೀಡಿ ಅವುಗಳನ್ನು ಹಾಳುಮಾಡಿರುವ ವ್ಯಕ್ತಿಯಾಗಿ ಅವನನ್ನು ಪರಿಚಯಿಸಲಾಗಿದೆ. ಹಣದ ಮೂಲಕ ಇತರರ ಬದುಕಿನ ಮೇಲೆ ಅಧಿಕಾರ ಸಾಧಿಸುವ ವ್ಯಕ್ತಿತ್ವ ಅವನದು. ಅವನಿಗೆ ಸಾಲಗಾರರು ಮನುಷ್ಯರಲ್ಲ; ಹಣ ಮರಳಿಸಬೇಕಾದ ಆರ್ಥಿಕ ಘಟಕಗಳು. ಇದೇ ಮನೋಭಾವ ರಂಗನ ಕುಟುಂಬದ ಮೇಲಿನ ಅವನ ವರ್ತನೆಯಲ್ಲಿಯೂ ವ್ಯಕ್ತವಾಗುತ್ತದೆ.

ರಂಗನು ಗೌಡರ ಒಕ್ಕಲಾಗಿದ್ದ ಬಡ ರೈತ. ಅವನ ಹೆಂಡತಿ ಮಗನನ್ನು ಹೆತ್ತ ಎರಡು ವರ್ಷಗಳಲ್ಲಿಯೇ ಸತ್ತಿದ್ದಾಳೆ. ಜೀವನದ ಅನಿವಾರ್ಯತೆಯಿಂದ ಮತ್ತೊಂದು ಮದುವೆ ಮಾಡಿಕೊಳ್ಳಲು ಬಯಸಿದ ರಂಗನಿಗೆ ಹಣದ ಅಗತ್ಯ ಎದುರಾಗುತ್ತದೆ. ಹೆಣ್ಣಿನ ಮನೆಯವರು ಮುನ್ನೂರು ರೂಪಾಯಿ ತೆರ ಕೇಳುತ್ತಾರೆ. ರಂಗನು ಗೌಡರ ಬಳಿ ಸಾಲ ಕೇಳಿದಾಗ ಈಗಾಗಲೇ ತನ್ನ ಮೇಲೆ ಮುನ್ನೂರು ರೂಪಾಯಿ ಸಾಲವಿದೆ ಎಂಬ ಕಾರಣ ನೀಡಿ ಗೌಡರು ಮತ್ತಷ್ಟು ಹಣ ಕೊಡಲು ನಿರಾಕರಿಸುತ್ತಾರೆ. ರಂಗನ ಮದುವೆ ನಡೆಯುವುದಿಲ್ಲ. ನಂತರ ಅವನು ರೋಗಕ್ಕೆ ತುತ್ತಾಗಿ ಸಾಯುತ್ತಾನೆ. ಅವನ ಸಾವಿನೊಂದಿಗೆ ಸಾಲ ಮುಗಿಯುವುದಿಲ್ಲ; ಬದಲಾಗಿ ಅವನ ಮಗ ಸುಬ್ಬನ ಬದುಕೇ ಆ ಸಾಲದ ಪರಿಹಾರವಾಗುತ್ತದೆ.

ಗೌಡನು ಸುಬ್ಬನನ್ನು ತನ್ನ ಮನೆಯಲ್ಲಿ ಜೀತದಾಳಾಗಿ ಇಟ್ಟುಕೊಳ್ಳುತ್ತಾನೆ. ಬಾಲಕನ ವಯಸ್ಸು ಎಂಟು–ಹತ್ತು ವರ್ಷಗಳಷ್ಟೇ. ಆದರೆ ಅವನ ಮೇಲೆ ದೊಡ್ಡವರ ಕೆಲಸಗಳನ್ನು ಹೊರಿಸಲಾಗುತ್ತದೆ. ಕೆಲಸ ಮಾಡಲು ಸಾಧ್ಯವಾಗದಿದ್ದರೂ

ಕೆಲಸ ಮಾಡಲೇಬೇಕು. ಅನಾರೋಗ್ಯದಿಂದ ಮಲಗಿದರೂ ವಿಶ್ರಾಂತಿ ಇಲ್ಲ. ಗೌಡನ ಹೊಡೆತ ಮತ್ತು ಬೆದರಿಕೆ ಅವನ ಬದುಕಿನ ಭಾಗವಾಗುತ್ತದೆ. ಹೀಗೆ ಸುಬ್ಬನ ಬಾಲ್ಯ, ಶಿಕ್ಷಣ, ಆಟ, ಕುಟುಂಬ ಮತ್ತು ಸ್ವಾತಂತ್ರ್ಯ ಎಲ್ಲವೂ ಸಾಲದ ಹೆಸರಿನಲ್ಲಿ ಕಸಿದುಕೊಳ್ಳಲ್ಪಡುತ್ತವೆ.

ಕಥೆಯ ಪ್ರಮುಖ ದುರಂತ ನಡುರಾತ್ರಿಯಲ್ಲಿ ನಡೆಯುತ್ತದೆ. ಭೀಕರ ಮಳೆ ಮತ್ತು ಗಾಳಿಯ ನಡುವೆಯೇ ಗೌಡನು ಸುಬ್ಬನನ್ನು ಎಬ್ಬಿಸಿ ಗದ್ದೆಯಲ್ಲಿ ಹಾಕಿದ್ದ ಕೂಣಿಯನ್ನು ನೋಡಿಕೊಂಡು ಬರಲು ಕಳುಹಿಸುತ್ತಾನೆ. ಕೈಯಲ್ಲಿ ಲಾಟೀನು, ಬೆನ್ನ ಮೇಲೆ ಕಂಬಳಿಕೊಪ್ಪೆ ಮತ್ತು ಜೊತೆಗೆ ಮೀನು ತರಬೇಕಾದ ಜವಾಬ್ದಾರಿ—ಇವೆಲ್ಲವನ್ನೂ ಹೊತ್ತು ಬಾಲಕ ಕತ್ತಲಿನಲ್ಲಿ ಹೊರಡುತ್ತಾನೆ. ದಾರಿಯಲ್ಲಿ ಕಾಲು ಜಾರಿ ಲಾಟೀನು ಒಡೆದುಹೋಗುತ್ತದೆ. ಆದರೂ ಗೌಡನ ಭಯದಿಂದ ಅವನು ಹಿಂದಿರುಗುವುದಿಲ್ಲ. ಕೊನೆಗೆ ಕೂಣಿಯ ಬಳಿ ಹೋಗಿ ಮೀನುಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಅದರೊಳಗಿದ್ದ ಕೃಷ್ಣಸರ್ಪ ಅವನನ್ನು ಕಚ್ಚುತ್ತದೆ. ವಿಷವೇರಿ ಸುಬ್ಬ ಅಲ್ಲಿಯೇ ಸಾವನ್ನಪ್ಪುತ್ತಾನೆ.

ಬೆಳಿಗ್ಗೆ ಸುಬ್ಬ ಮನೆಗೆ ಮರಳದಿದ್ದಾಗ ಗೌಡನಿಗೆ ಅವನ ಸಾವಿನ ಬಗ್ಗೆ ಕಳವಳವಾಗುವುದಿಲ್ಲ; ಬದಲಾಗಿ ಅವನು ಕೆಲಸ ಮಾಡದೆ ತಪ್ಪಿಸಿಕೊಂಡಿದ್ದಾನೆ ಎಂಬ ಕೋಪ ಉಂಟಾಗುತ್ತದೆ. ಹುಡುಕುತ್ತಾ ಹೋದಾಗ ಸುಬ್ಬನ ಹೆಣ ದೊರೆಯುತ್ತದೆ. ಆಗಲೂ ಗೌಡನ ಮನಸ್ಸಿನಲ್ಲಿ ಮಾನವೀಯ ದುಃಖಕ್ಕಿಂತ ಹಣದ ಲೆಕ್ಕವೇ ಮುಖ್ಯವಾಗುತ್ತದೆ. "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು!" ಎಂಬ ಅವನ ಮಾತು ಕಥೆಯ ಅಂತ್ಯ ಮಾತ್ರವಲ್ಲ; ಇಡೀ ಶೋಷಣಾತ್ಮಕ ವ್ಯವಸ್ಥೆಯ ವಿರುದ್ಧದ ಕಟುವಾದ ವ್ಯಂಗ್ಯವೂ ಆಗಿದೆ.

"ಸಾಲದ ಮಗು" ಕಥೆಯ ಅತ್ಯಂತ ಪ್ರಮುಖ ಸಾಮಾಜಿಕ ಆಯಾಮವೆಂದರೆ ಸಾಲದ ಮೂಲಕ ನಡೆಯುವ ಶೋಷಣೆ. ಬಡತನದಲ್ಲಿರುವ ವ್ಯಕ್ತಿಗೆ ಸಾಲವು ಕೆಲವೊಮ್ಮೆ ಬದುಕಿನ ಅನಿವಾರ್ಯ ಅಗತ್ಯವಾಗಬಹುದು. ಆದರೆ ಸಾಲ ಕೊಡುವ ವ್ಯಕ್ತಿಯು ಆರ್ಥಿಕ ಶಕ್ತಿಯನ್ನು ಸಾಮಾಜಿಕ ಅಧಿಕಾರವನ್ನಾಗಿ ಬಳಸಿಕೊಂಡಾಗ ಅದು ಶೋಷಣೆಯ ಸಾಧನವಾಗುತ್ತದೆ. ರಂಗನ ಜೀವನದಲ್ಲಿ ಇದೇ ಸಂಭವಿಸುತ್ತದೆ. ಅವನು ತನ್ನ ವೈಯಕ್ತಿಕ ಬದುಕಿನ ಅಗತ್ಯಕ್ಕಾಗಿ ಹಣ ಕೇಳುತ್ತಾನೆ. ಆದರೆ ಅವನ ಆರ್ಥಿಕ ಅಸಹಾಯಕತೆಯನ್ನು ಗೌಡನು ಮಾನವೀಯ ದೃಷ್ಟಿಯಿಂದ ನೋಡುವುದಿಲ್ಲ. ರಂಗನ ಸಾವಿನ ನಂತರ ಅವನ ಸಾಲವನ್ನು ಅವನ ಮಗನ ಶ್ರಮದ ಮೂಲಕ ವಸೂಲು ಮಾಡುವುದು ಕಥೆಯ ಅತ್ಯಂತ ಅಮಾನವೀಯ ಅಂಶ. ಇಲ್ಲಿ ಸಾಲದ ಹೊಣೆಗಾರಿಕೆ ವೈಯಕ್ತಿಕ ವ್ಯಕ್ತಿಯಿಂದ ಕುಟುಂಬದ ಮುಂದಿನ ಪೀಳಿಗೆಗೆ ವರ್ಗಾಯುತ್ತದೆ. ಸಾಲದ ಕಾರಣದಿಂದ ಮಗು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಕಥೆಯ ಶೀರ್ಷಿಕೆಯಲ್ಲಿರುವ "ಸಾಲದ" ಎಂಬ ಪದವು ಕೇವಲ ಆರ್ಥಿಕ ಸಾಲವನ್ನು ಸೂಚಿಸುವುದಿಲ್ಲ. ಅದು ಒಂದು ಮಗುವಿನ ಬದುಕಿನ ಮೇಲೆ ಹೇರಲಾದ ಸಾಮಾಜಿಕ ಬಂಧನವನ್ನು ಸೂಚಿಸುತ್ತದೆ.

ಗೌಡನ ಆರ್ಥಿಕ ಶಕ್ತಿಯೇ ಅವನ ಸಾಮಾಜಿಕ ಅಧಿಕಾರದ ಮೂಲವಾಗಿದೆ. ಅವನನ್ನು ಗ್ರಾಮದ ಜನರು ಹುಲಿಯನ್ನು ಕಂಡಂತೆ ಭಯಪಡುತ್ತಾರೆ. ಜನರ ಭಯವನ್ನು ಆತ ಗೌರವವೆಂದು ತಪ್ಪಾಗಿ ಅರ್ಥೈಸಿಕೊಳ್ಳುತ್ತಾನೆ. ಈ ಮನೋಭಾವವು ಅಧಿಕಾರವು ಹೇಗೆ ಸ್ವಾಭಾವಿಕ ಮಾನವ ಸಂಬಂಧಗಳನ್ನು ಹಾಳುಮಾಡುತ್ತದೆ ಎಂಬುದನ್ನು ತೋರಿಸುತ್ತದೆ. ಹಣ ಹೊಂದಿರುವವನು ತನ್ನನ್ನು ಇತರರಿಗಿಂತ ಮೇಲಿನವನಾಗಿ ಭಾವಿಸುವ ವರ್ಗಮನೋಭಾವ ಕಥೆಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಸುಬ್ಬನ ಪಾತ್ರದ ಮೂಲಕ ಕುವೆಂಪು ಬಾಲಕಾರ್ಮಿಕತೆಯ ದಾರುಣತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಎಂಟು–ಹತ್ತು ವರ್ಷದ ಮಗು ಆಟವಾಡಬೇಕಾದ ವಯಸ್ಸಿನಲ್ಲಿ ಗದ್ದೆಯಲ್ಲಿ ದುಡಿಯುತ್ತಿದೆ. ಅವನಿಗೆ ಶಿಕ್ಷಣದ ಅವಕಾಶವಿಲ್ಲ. ಸ್ನೇಹಿತರೊಂದಿಗೆ ಆಟವಾಡುವ ಅವಕಾಶವಿಲ್ಲ. ತಾಯಿಯ ಮಮತೆ ಇಲ್ಲ. ತಂದೆಯ ರಕ್ಷಣೆಯೂ ಇಲ್ಲ. ಅವನಿಗೆ ಉಳಿದಿರುವುದು ಕೆಲಸ, ಭಯ, ಹಸಿವು, ಹೊಡೆತ ಮತ್ತು ನಿದ್ರೆ.

ಕಥೆಯಲ್ಲಿ ಸುಬ್ಬನ ನಿದ್ರೆಯ ಚಿತ್ರಣ ಅತ್ಯಂತ ಅರ್ಥಪೂರ್ಣವಾಗಿದೆ. ದಿನವಿಡೀ ದುಡಿದ ನಂತರ ಅವನು ಚಿಂದಿ ಕಂಬಳಿಗಳನ್ನು ಸುತ್ತಿಕೊಂಡು ನಿದ್ರಿಸುತ್ತಾನೆ. ಆ ನಿದ್ರೆ ಅವನಿಗೆ ದೊರೆತ ಏಕೈಕ ಸ್ವಾತಂತ್ರ್ಯದ ಸ್ಥಳವಾಗಿದೆ. ಜಾಗೃತ ಬದುಕಿನಲ್ಲಿ ಅವನಿಗೆ ಸಿಗದ ಸಂತೋಷಗಳು ಕನಸಿನಲ್ಲಿ ಸಿಗುತ್ತವೆ. ತಂದೆ–ತಾಯಿಯರೊಂದಿಗೆ ಸುಖವಾಗಿ ಬದುಕುವ, ಸುಂದರ ಸೌಧದಲ್ಲಿ ಇರುವ, ಉತ್ತಮ ಉಡುಪು ಧರಿಸುವ, ಕೆಲಸವಿಲ್ಲದೆ ಇರುವ ಮತ್ತು ಆಟವಾಡುವ ಹುಡುಗನಾಗಿ ಅವನು ತನ್ನನ್ನು ಕನಸಿನಲ್ಲಿ ಕಾಣುತ್ತಾನೆ. ಈ ಕನಸು ವಾಸ್ತವದ ವಿರುದ್ಧದ ಪ್ರತಿರೂಪವಾಗಿದೆ. ಜಾಗೃತ ಸ್ಥಿತಿಯಲ್ಲಿ ಅವನು ಶೋಷಿತ ಬಾಲಕ. ಕನಸಿನಲ್ಲಿ ಮಾತ್ರ ಅವನು ಸ್ವತಂತ್ರ ಮಗು. ಆದರೆ ಗೌಡನ ಬೆತ್ತದ ಏಟು ಆ ಕನಸಿನ ಲೋಕವನ್ನೂ ನಾಶಮಾಡುತ್ತದೆ. ಈ ಘಟನೆಯ ಮೂಲಕ ಕುವೆಂಪು ಬಾಲಕಾರ್ಮಿಕತೆಯು ಮಗುವಿನ ದೇಹವನ್ನು ಮಾತ್ರವಲ್ಲ, ಅದರ ಕನಸು ಮತ್ತು ಮನಸ್ಸನ್ನೂ ಶೋಷಿಸುತ್ತದೆ ಎಂಬ ಸತ್ಯವನ್ನು ಸೂಚಿಸುತ್ತಾರೆ.

ಕಥೆಯ ಅತ್ಯಂತ ಮನೋವೈಜ್ಞಾನಿಕವಾಗಿ ಪರಿಣಾಮಕಾರಿ ಭಾಗವೆಂದರೆ ಸುಬ್ಬನ ಕನಸು. ಸುಬ್ಬನಿಗೆ ವಾಸ್ತವದಲ್ಲಿ ತಂದೆ–ತಾಯಿಯರ ಮಮತೆ ಇಲ್ಲ. ತಂದೆ ಸತ್ತಿದ್ದಾನೆ; ತಾಯಿ ಬಹಳ ಹಿಂದೆಯೇ ಮೃತಪಟ್ಟಿದ್ದಾಳೆ. ಅವನು ಪರದೇಶಿಯಂತೆ ಗೌಡನ ಮನೆಯಲ್ಲಿ ಬದುಕುತ್ತಿದ್ದಾನೆ. ಹೀಗಾಗಿ ಅವನ ಕನಸಿನಲ್ಲಿ ಕಾಣಿಸಿಕೊಳ್ಳುವ ತಂದೆ–ತಾಯಿ ಅವನ ಅಂತರಂಗದ ಬಯಕೆಯ ಪ್ರತೀಕಗಳು.

ಕನಸಿನಲ್ಲಿ ಅವನಿಗೆ ಕೆಲಸವಿಲ್ಲ. ಅವನ ಕೈಕಾಲುಗಳಿಗೆ ಆಳುಗಳಿದ್ದಾರೆ. ಅವನೊಂದಿಗೆ ಆಟವಾಡಲು ಮಕ್ಕಳು ಇದ್ದಾರೆ. ಬೇಕಾದಷ್ಟು ಭಕ್ಷ್ಯಭೋಜ್ಯಗಳಿವೆ. ಈ ಚಿತ್ರಣವು ಬಾಲಕನ ಮೂಲಭೂತ ಮಾನವೀಯ ಬಯಕೆಗಳನ್ನು ವ್ಯಕ್ತಪಡಿಸುತ್ತದೆ. ಮಗು ಬಯಸುವುದು ಐಶ್ವರ್ಯವಲ್ಲ; ಭದ್ರತೆ, ಪ್ರೀತಿ, ಆಟ ಮತ್ತು ಆಹಾರ. ಆದರೆ ಶೋಷಣಾತ್ಮಕ ವ್ಯವಸ್ಥೆಯು ಅವನಿಗೆ ಇವುಗಳನ್ನೂ ನಿರಾಕರಿಸುತ್ತದೆ. ಕನಸಿನಿಂದ ಎಚ್ಚರವಾದ ಕ್ಷಣವೇ ಸುಬ್ಬನ ಬದುಕಿನ ಕಠಿಣ ವಾಸ್ತವಕ್ಕೆ ಮರಳುವ ಕ್ಷಣ. ಕನಸಿನ ಸುಂದರ ಸೌಧದಿಂದ ಗೌಡನ ರುದ್ರಮೂರ್ತಿಯ ಮುಂದೆ ಅವನು ನಿಂತುಕೊಳ್ಳುತ್ತಾನೆ. ಹೀಗಾಗಿ ಕನಸು ಮತ್ತು ವಾಸ್ತವದ ನಡುವಿನ ಈ ತೀವ್ರ ವ್ಯತ್ಯಾಸವು ಕಥೆಯ ಸಾಮಾಜಿಕ ಸಂದೇಶವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತದೆ.

ಗೌಡನು ಕಥೆಯ ಪ್ರಮುಖ ಪ್ರತಿನಾಯಕ. ಅವನ ವ್ಯಕ್ತಿತ್ವವನ್ನು ಕುವೆಂಪು ಕೇವಲ ದುಷ್ಟ ವ್ಯಕ್ತಿಯಾಗಿ ಚಿತ್ರಿಸಿಲ್ಲ; ಅವನ ಮೂಲಕ ಒಂದು ನಿರ್ದಿಷ್ಟ ಸಾಮಾಜಿಕ ಮನೋಭಾವವನ್ನು ಪ್ರತಿನಿಧಿಸಿದ್ದಾರೆ. ಹಣ, ಅಧಿಕಾರ ಮತ್ತು ಧಾರ್ಮಿಕ ಆಚರಣೆಗಳನ್ನು ಹೊಂದಿದ್ದರೂ ಅವನೊಳಗೆ ಮಾನವೀಯತೆ ಕಾಣುವುದಿಲ್ಲ.

ಗೌಡನು ಸಾಲಕೊಡುವವನು. ಬಡವರನ್ನು ಹೆಚ್ಚಿನ ಬಡ್ಡಿಯಲ್ಲಿ ಸಾಲಕ್ಕೆ ಒಳಪಡಿಸುವವನು. ಗ್ರಾಮದಲ್ಲಿ ಪ್ರಭಾವಿ ವ್ಯಕ್ತಿ. ಜನರು ಅವನನ್ನು ಭಯಪಡುತ್ತಾರೆ. ಆದರೆ ತನ್ನ ಈ ಸಾಮಾಜಿಕ ಸ್ಥಾನವನ್ನು ಆತ ಸೇವೆಯಾಗಿ ಬಳಸುವುದಿಲ್ಲ; ಬದಲಾಗಿ ಇತರರನ್ನು ನಿಯಂತ್ರಿಸುವ ಸಾಧನವಾಗಿ ಬಳಸುತ್ತಾನೆ. ಸುಬ್ಬನ ಮೇಲೆ ಅವನು ನಡೆಸುವ ದೌರ್ಜನ್ಯವು ಈ ಅಧಿಕಾರದ ಅತ್ಯಂತ ಕ್ರೂರ ರೂಪ.

ಗೌಡನ ಕಠೋರತೆಯ ಮತ್ತೊಂದು ಮುಖವೆಂದರೆ ಅವನಿಗೆ ಸುಬ್ಬನ ನೋವು ಕಾಣುವುದಿಲ್ಲ. ಬಾಲಕ ಜ್ವರದಿಂದ ಬಳಲುತ್ತಿದ್ದರೂ ಕೆಲಸಕ್ಕೆ ಕಳುಹಿಸುತ್ತಾನೆ. ನಿದ್ರೆಯಲ್ಲಿದ್ದಾಗ ಎಬ್ಬಿಸಿ ಹೊಡೆಯುತ್ತಾನೆ. ಭೀಕರ ಮಳೆ ಮತ್ತು ಕತ್ತಲಿನಲ್ಲಿಯೂ ಅವನನ್ನು ಹೊರಗೆ ಕಳುಹಿಸುತ್ತಾನೆ. ಕೊನೆಗೆ ಅವನು ಸತ್ತಾಗಲೂ “ಮುನ್ನೂರು ರೂಪಾಯಿ” ಎಂಬ ಆರ್ಥಿಕ ಲೆಕ್ಕವೇ ಗೌಡನ ಮನಸ್ಸಿನಲ್ಲಿ ಉಳಿಯುತ್ತದೆ. ಹೀಗಾಗಿ ಗೌಡ ವ್ಯಕ್ತಿಯಷ್ಟೇ ಅಲ್ಲ; ಮನುಷ್ಯನನ್ನು ಹಣದ ಮೌಲ್ಯದಲ್ಲಿ ಅಳೆಯುವ ವ್ಯವಸ್ಥೆಯ ಪ್ರತೀಕವಾಗುತ್ತಾನೆ.

ಗೌಡನ ಪಾತ್ರದ ಮೂಲಕ ಕುವೆಂಪು ಧಾರ್ಮಿಕ ಆಚರಣೆ ಮತ್ತು ನಿಜವಾದ ಧಾರ್ಮಿಕ ಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಬಯಲಿಗೆಳೆಯುತ್ತಾರೆ. ಗೌಡನು ಪ್ರತಿದಿನ ಶಿವಪೂಜೆ ಮಾಡುತ್ತಾನೆ. ಮೈ ತುಂಬಾ ನಾಮದ ಪಟ್ಟೆ

ಹಾಕಿಕೊಳ್ಳುತ್ತಾನೆ. ಬ್ರಾಂದಿ ಕುಡಿಯುವಾಗಲೂ ಹೊರಗಿನವರು ತಾನು ದೇವರ ಧ್ಯಾನದಲ್ಲಿದ್ದೇನೆಂದು ಭಾವಿಸಲಿ ಎಂಬ ಉದ್ದೇಶದಿಂದ "ಹರಿ ನಾರಾಯಣ" ಎಂದು ಜೋರಾಗಿ ಹೇಳುತ್ತಾನೆ. ಇಲ್ಲಿ ಧರ್ಮವು ಅವನಿಗೆ ಆತ್ಮಶುದ್ಧಿಯ ಸಾಧನವಲ್ಲ; ತನ್ನ ಸಾಮಾಜಿಕ ಗೌರವವನ್ನು ಕಾಪಾಡಿಕೊಳ್ಳುವ ಮುಖವಾಡ. ಒಂದು ಕಡೆ ದೇವರ ನಾಮಸ್ಮರಣೆ ಮಾಡುವ ವ್ಯಕ್ತಿ ಮತ್ತೊಂದು ಕಡೆ ಅನಾಥ ಬಾಲಕನನ್ನು ಹೊಡೆಯುತ್ತಾನೆ, ದುಡಿಸುತ್ತಾನೆ, ಅವನ ಅನಾರೋಗ್ಯವನ್ನು ನಿರ್ಲಕ್ಷಿಸುತ್ತಾನೆ. ಈ ವೈರುಧ್ಯದ ಮೂಲಕ ಕುವೆಂಪು ಧಾರ್ಮಿಕತೆಯ ಹೆಸರಿನಲ್ಲಿ ನಡೆಯುವ ಕಪಟವನ್ನು ಪ್ರಶ್ನಿಸುತ್ತಾರೆ. ನಿಜವಾದ ಧಾರ್ಮಿಕತೆ ಮನುಷ್ಯನ ಮೇಲೆ ಕರುಣೆ, ಪ್ರೀತಿ ಮತ್ತು ಸಹಾನುಭೂತಿಯನ್ನು ಬೆಳೆಸಬೇಕಾಗಿದೆ. ಆದರೆ ಗೌಡನ ಧರ್ಮವು ಅವನ ವರ್ತನೆಯಲ್ಲಿ ಯಾವುದೇ ಮಾನವೀಯ ಪರಿವರ್ತನೆಯನ್ನು ಉಂಟುಮಾಡುವುದಿಲ್ಲ. ಹೀಗಾಗಿ ಕಥೆ ಆಚರಣಾಧಾರಿತ ಧರ್ಮಕ್ಕಿಂತ ಮಾನವೀಯತೆಯೇ ಶ್ರೇಷ್ಠ ಎಂಬ ಮೌಲ್ಯವನ್ನು ಪ್ರತಿಪಾದಿಸುತ್ತದೆ.

"ಸಾಲದ ಮಗು" ಕಥೆಯ ಮತ್ತೊಂದು ಪ್ರಮುಖ ವೈಶಿಷ್ಟ್ಯವೆಂದರೆ ಅದರ ಪ್ರಕೃತಿ ಚಿತ್ರಣ. ಕಥೆಯ ಆರಂಭದಲ್ಲಿ ಕುವೆಂಪು ಮಲೆನಾಡಿನ ಮಳೆಗಾಲದ ದೃಶ್ಯವನ್ನು ಅತ್ಯಂತ ಜೀವಂತವಾಗಿ ಕಟ್ಟಿಕೊಡುತ್ತಾರೆ. ಮಳೆ, ಗಾಳಿ, ಕತ್ತಲೆ, ಕಪ್ಪೆಗಳ ವಟಗುಟ್ಟುವಿಕೆ, ನಿಶಾಚರ ಜೀವಿಗಳ ಧ್ವನಿ, ತೆಂಗಿನ ಮರಗಳ ಮರ್ಮರ, ಮಿಂಚು, ಗುಡುಗು, ನೀರ್ಗಾಲುವೆಗಳ ಭೋರ್ಗರೆತ— ಇವೆಲ್ಲ ಸೇರಿ ಒಂದು ಭಯಾನಕ ವಾತಾವರಣವನ್ನು ನಿರ್ಮಿಸುತ್ತವೆ.

ಈ ಪ್ರಕೃತಿ ವರ್ಣನೆ ಕೇವಲ ಸೌಂದರ್ಯವರ್ಣನೆಯಲ್ಲ. ಅದು ಕಥೆಯ ಭಾವನಾತ್ಮಕ ಹಿನ್ನೆಲೆಯಾಗಿ ಕಾರ್ಯನಿರ್ವಹಿಸುತ್ತದೆ. ಸುಬ್ಬನ ಬದುಕು ಹೇಗೆ ಕತ್ತಲಿನಿಂದ ಆವೃತವಾಗಿದೆಯೋ ಹಾಗೆಯೇ ಅವನು ಸಾಗುವ ದಾರಿಯೂ ಕತ್ತಲಿನಿಂದ ತುಂಬಿದೆ. ಅವನ ಸುತ್ತಲಿನ ಪ್ರಕೃತಿ ರುದ್ರವಾಗಿದೆ; ಅವನ ಸಾಮಾಜಿಕ ಪರಿಸರವೂ ರುದ್ರವಾಗಿದೆ. ಕಥೆಯ ಕೊನೆಯಲ್ಲಿ ಸುಬ್ಬ ಹಾವಿನ ಕಡಿತದಿಂದ ಸಾಯುವಾಗಲೂ ಪ್ರಕೃತಿ ತನ್ನ ಸಹಜ ಚಲನೆಯಲ್ಲಿಯೇ ಮುಂದುವರಿಯುತ್ತದೆ. "ಜಗಚ್ಚಕ್ರವು ಆ ಕ್ಷುದ್ರ ವಿಷಯವನ್ನು ಗಣನೆಗೆ ತಾರದೆ ತಿರುಗುತ್ತಲೆ ಇತ್ತು" ಎಂಬ ಆಶಯವು ವ್ಯಕ್ತಿಯ ದುರಂತದ ಎದುರು ವಿಶ್ವದ ನಿರ್ಲಿಪ್ತತೆಯನ್ನು ಸೂಚಿಸುತ್ತದೆ. ಆದರೆ ಈ ನಿರ್ಲಿಪ್ತ ಪ್ರಕೃತಿಯ ವಿರುದ್ಧವಾಗಿ ಓದುಗರ ಮನಸ್ಸಿನಲ್ಲಿ ಉಂಟಾಗುವ ಕರುಣೆ ಕಥೆಯ ಮಾನವೀಯ ಶಕ್ತಿಯನ್ನು ಹೆಚ್ಚಿಸುತ್ತದೆ.

ಕಥೆಯಲ್ಲಿ ಪ್ರಕೃತಿಯು ಕೇವಲ ಹಿನ್ನೆಲೆಯಾಗಿಲ್ಲ; ಅದು ಕಥೆಯ ಅಂತರಂಗದೊಂದಿಗೆ ಸಂವಾದ ನಡೆಸುವ ಶಕ್ತಿಯಾಗಿ ಕಾಣುತ್ತದೆ. ಮಳೆಗಾಲದ ಕತ್ತಲೆ ಸುಬ್ಬನ ಜೀವನದ ಕತ್ತಲೆಯೊಂದಿಗೆ ಸಮಾನಾಂತರವಾಗುತ್ತದೆ. ಬಿರುಗಾಳಿ ಗೌಡನ ಕ್ರೌರ್ಯದಂತೆ ಭಾಸವಾಗುತ್ತದೆ. ಪ್ರವಾಹ ಮತ್ತು ಕೆಸರು ಅವನ ಮುಂದಿರುವ ಅಸಾಧ್ಯ ಜೀವನಪಥವನ್ನು ಸೂಚಿಸುತ್ತವೆ.

ಆದರೆ ಪ್ರಕೃತಿ ತನ್ನದೇ ಆದ ನಿಯಮದಲ್ಲಿ ನಡೆಯುತ್ತದೆ. ಅದು ಸುಬ್ಬನನ್ನು ಕೊಲ್ಲಲು ಉದ್ದೇಶಪೂರ್ವಕವಾಗಿ ಬಂದಿಲ್ಲ. ಹಾವಿನ ಕಡಿತವೂ ಪ್ರಕೃತಿಯ ಸಹಜ ಕ್ರಿಯೆಯೇ. ಆದರೆ ಆ ದುರಂತಕ್ಕೆ ಕಾರಣವಾದ ಸಾಮಾಜಿಕ ಪರಿಸ್ಥಿತಿ ಮಾನವ ನಿರ್ಮಿತ. ಸುಬ್ಬನನ್ನು ಆ ರಾತ್ರಿ ಹೊರಗೆ ಕಳುಹಿಸದಿದ್ದರೆ, ಅವನು ಆ ಅಪಾಯಕ್ಕೆ ಒಳಗಾಗುತ್ತಿರಲಿಲ್ಲ. ಹೀಗಾಗಿ ಅವನ ಸಾವಿನ ನೇರ ಕಾರಣ ಹಾವಿನ ವಿಷವಾದರೂ ಅದರ ಮೂಲ ಕಾರಣ ಸಾಮಾಜಿಕ ಶೋಷಣೆಯೇ ಆಗಿದೆ.

ಕಥೆಯಲ್ಲಿ ಗೌಡ ಮತ್ತು ಸುಬ್ಬರ ನಡುವಿನ ಸಂಬಂಧವು ಎರಡು ಸಾಮಾಜಿಕ ವರ್ಗಗಳ ನಡುವಿನ ಅಂತರವನ್ನು ಪ್ರತಿನಿಧಿಸುತ್ತದೆ. ಒಂದು ಕಡೆ ಹಣ, ಆಸ್ತಿ, ಅಧಿಕಾರ ಮತ್ತು ಸಾಮಾಜಿಕ ಪ್ರತಿಷ್ಠೆಯನ್ನು ಹೊಂದಿರುವ ಗೌಡ. ಇನ್ನೊಂದು ಕಡೆ ಆರ್ಥಿಕವಾಗಿ ಅಸಹಾಯಕನಾದ ಅನಾಥ ಬಾಲಕ. ಈ ಎರಡು ವರ್ಗಗಳ ನಡುವೆ ಸಮಾನ ಸಂಬಂಧವಿಲ್ಲ. ಗೌಡನು ಆಜ್ಞಾಪಿಸುತ್ತಾನೆ; ಸುಬ್ಬ ವಿಧೇಯನಾಗಬೇಕು. ಗೌಡ ಹೊಡೆಯುತ್ತಾನೆ; ಸುಬ್ಬ ಸಹಿಸಬೇಕು. ಗೌಡ ಮಲಗುತ್ತಾನೆ; ಸುಬ್ಬ ನಡುರಾತ್ರಿಯಲ್ಲಿ ಮಳೆಗೆ ಹೋಗಬೇಕು. ಈ ಸಂಬಂಧದಲ್ಲಿ ಮನುಷ್ಯತ್ವದ ಸಮಾನತೆ ಸಂಪೂರ್ಣವಾಗಿ ಕಳೆದುಹೋಗಿದೆ. ಸುಬ್ಬನ ಜೀವಕ್ಕೆ ಗೌಡನಿಗೆ ಇರುವ ಮೌಲ್ಯ ಮುನ್ನೂರು ರೂಪಾಯಿಗಳಿಗಿಂತ ಹೆಚ್ಚಿಲ್ಲ. ಕಥೆಯ ಕೊನೆಯ ಮಾತು ಈ

ವರ್ಗಸಂಬಂಧದ ಕ್ರೂರತೆಯನ್ನು ಅತ್ಯಂತ ಸಂಕ್ಷಿಪ್ತವಾಗಿ ವ್ಯಕ್ತಪಡಿಸುತ್ತದೆ. ಇಲ್ಲಿ "ಮುನ್ನೂರು ರೂಪಾಯಿ" ಎಂಬ ಮೊತ್ತವು ಕೇವಲ ಹಣದ ಪ್ರಮಾಣವಲ್ಲ. ಅದು ಮನುಷ್ಯನ ಜೀವವನ್ನು ಹಣದ ಮೌಲ್ಯಕ್ಕೆ ಇಳಿಸಿದ ಸಾಮಾಜಿಕ ಮನೋಭಾವದ ಸಂಕೇತ. ಸುಬ್ಬನ ದೇಹ, ಶ್ರಮ, ಬಾಲ್ಯ ಮತ್ತು ಕೊನೆಗೆ ಅವನ ಜೀವ—ಎಲ್ಲವೂ ಆ ಸಾಲದ ಲೆಕ್ಕದಲ್ಲಿ ಕರಗಿಹೋಗುತ್ತವೆ.

ಸುಬ್ಬ ಕಥೆಯಲ್ಲಿ ಯಾವುದೇ ದೊಡ್ಡ ಮಾತುಗಳನ್ನು ಆಡುವುದಿಲ್ಲ. ಅವನು ಗೌಡನ ವಿರುದ್ಧ ಬಂಡಾಯ ಮಾಡುವುದಿಲ್ಲ. ಅವನಿಗೆ ತನ್ನ ಹಕ್ಕುಗಳ ಬಗ್ಗೆ ಅರಿವು ಇಲ್ಲ. ಆದರೆ ಅವನ ಮೌನವೇ ಕಥೆಯ ಅತ್ಯಂತ ಶಕ್ತಿಶಾಲಿ ಪ್ರತಿರೋಧವಾಗಿದೆ. ಅವನ ಕಣ್ಣೀರು, ಭಯ, ಕನಸು, ದಣಿವು, ಅನಾರೋಗ್ಯ ಮತ್ತು ಕೊನೆಗೆ ಅವನ ಹೆಣ—ಇವೆಲ್ಲವೂ ಶೋಷಣಾತ್ಮಕ ವ್ಯವಸ್ಥೆಯ ವಿರುದ್ಧ ಮಾತನಾಡುತ್ತವೆ.

ಕಥೆಯಲ್ಲಿ ಸುಬ್ಬನಿಗೆ ಸ್ವರವನ್ನು ನೀಡದೆ ಅವನ ಪರಿಸ್ಥಿತಿಯನ್ನೇ ಮಾತನಾಡಲು ಬಿಡಲಾಗಿದೆ. ಇದು ಕುವೆಂಪು ಅವರ ಕಥನದ ಪ್ರಮುಖ ಶಕ್ತಿ. ಓದುಗನು ಸುಬ್ಬನ ಪರವಾಗಿ ಪ್ರಶ್ನೆ ಕೇಳುವಂತಾಗುತ್ತದೆ: ಮಗುವಿನ ತಪ್ಪೇನು? ತಂದೆಯ ಸಾಲಕ್ಕೆ ಅವನು ಏಕೆ ಶಿಕ್ಷೆ ಅನುಭವಿಸಬೇಕು? ಅನಾರೋಗ್ಯದಲ್ಲಿದ್ದಾಗಲೂ ಅವನನ್ನು ಏಕೆ ದುಡಿಸಬೇಕು? ನಡುರಾತ್ರಿಯಲ್ಲಿ ಭೀಕರ ಮಳೆಯ ನಡುವೆ ಅವನನ್ನು ಏಕೆ ಕಳುಹಿಸಬೇಕು? ಈ ಪ್ರಶ್ನೆಗಳಿಗೆ ಕಥೆಯೇ ಉತ್ತರ ನೀಡುತ್ತದೆ—ಇದು ವ್ಯಕ್ತಿಯ ತಪ್ಪಿನಿಂದ ಉಂಟಾದ ದುರಂತವಲ್ಲ; ಸಾಮಾಜಿಕ ವ್ಯವಸ್ಥೆಯ ಅಮಾನವೀಯತೆಯಿಂದ ಉಂಟಾದ ದುರಂತ.

"ಸಾಲದ ಮಗು" ಕಥೆಯ ಅಂತ್ಯ ಕನ್ನಡ ಸಣ್ಣಕಥಾ ಪರಂಪರೆಯಲ್ಲಿ ಗಮನಾರ್ಹವಾದ ದಾರುಣ ಅಂತ್ಯಗಳಲ್ಲಿ ಒಂದಾಗಿ ಪರಿಗಣಿಸಬಹುದಾದಷ್ಟು ಪರಿಣಾಮಕಾರಿಯಾಗಿದೆ. ಸುಬ್ಬನ ಹೆಣವನ್ನು ಕಂಡು ಗೌಡನು "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು!" ಎಂದು ಹೇಳುತ್ತಾನೆ. ಈ ಒಂದು ಮಾತು ಇಡೀ ಕಥೆಯ ಅರ್ಥವನ್ನು ತಲೆಕೆಳಗಾಗಿ ಓದುಗರ ಮುಂದೆ ಇಡುತ್ತದೆ.

ಸಾಮಾನ್ಯವಾಗಿ ಮಗುವಿನ ಮರಣವು ದುಃಖವನ್ನು ಉಂಟುಮಾಡಬೇಕು. ಆದರೆ ಗೌಡನಿಗೆ ಅದು ಹಣ ವಸೂಲಾದ ಘಟನೆ. ಹೀಗಾಗಿ ಇಲ್ಲಿ ಮನುಷ್ಯನ ಜೀವ ಮತ್ತು ಹಣದ ನಡುವಿನ ಮೌಲ್ಯಕ್ರಮ ಸಂಪೂರ್ಣವಾಗಿ ಬದಲಾಗಿದೆ. ಮನುಷ್ಯನ ಜೀವಕ್ಕಿಂತ ಹಣಕ್ಕೆ ಹೆಚ್ಚಿನ ಮೌಲ್ಯ ದೊರೆತಿದೆ. ಈ ವ್ಯಂಗ್ಯವು ಕಥೆಯ ಸಾಮಾಜಿಕ ವಿಮರ್ಶೆಯನ್ನು ತೀವ್ರಗೊಳಿಸುತ್ತದೆ.

ಇಲ್ಲಿ "ಮುನ್ನೂರು ರೂಪಾಯಿ" ಆರಂಭದಿಂದಲೂ ಕಥೆಯನ್ನು ಹಿಂಬಾಲಿಸುತ್ತಿರುವ ಮೊತ್ತ. ರಂಗನ ಮದುವೆ ನಿಲ್ಲಲು ಕಾರಣವಾದ ಮೊತ್ತವೂ ಇದೇ. ಅವನ ಮಗನನ್ನು ಜೀತಕ್ಕೆ ತೆಗೆದುಕೊಳ್ಳಲು ಕಾರಣವಾದ ಸಾಲವೂ ಇದೇ. ಸುಬ್ಬನ ಸಾವಿನ ನಂತರ ಗೌಡನು ನೆನಪಿಸಿಕೊಳ್ಳುವುದೂ ಇದೇ. ಹೀಗಾಗಿ ಮುನ್ನೂರು ರೂಪಾಯಿ ಕಥೆಯಲ್ಲಿ ಒಂದು ಸಂಕೇತಾತ್ಮಕ ಪಾತ್ರವನ್ನು ವಹಿಸುತ್ತದೆ. ಅದು ಸಾಲದ ಆರ್ಥಿಕ ಮೌಲ್ಯವಲ್ಲ; ಮನುಷ್ಯನ ಬದುಕಿನ ಮೇಲೆ ಹಣದ ಅಧಿಪತ್ಯದ ಸಂಕೇತವಾಗಿದೆ.

ಕುವೆಂಪು ಅವರ ಸಾಹಿತ್ಯದ ಕೇಂದ್ರದಲ್ಲಿ ಮನುಷ್ಯನ ಘನತೆ ಮತ್ತು ಮಾನವೀಯತೆ ಪ್ರಮುಖ ಮೌಲ್ಯಗಳಾಗಿವೆ. "ಸಾಲದ ಮಗು" ಕಥೆಯಲ್ಲಿಯೂ ಇದೇ ಮಾನವೀಯ ದೃಷ್ಟಿಕೋನವನ್ನು ಗುರುತಿಸಬಹುದು. ಕಥೆಯಲ್ಲಿ ಲೇಖಕರು ನೇರವಾಗಿ ಉಪದೇಶ ಮಾಡುವುದಿಲ್ಲ. ಬದಲಾಗಿ ಒಂದು ಬಾಲಕನ ದುರಂತವನ್ನು ನಮ್ಮ ಮುಂದೆ ಇಡುತ್ತಾರೆ. ಆ ದುರಂತವನ್ನು ಕಂಡ ನಂತರ ಓದುಗನೇ ಸಾಮಾಜಿಕ ಅನ್ಯಾಯವನ್ನು ಪ್ರಶ್ನಿಸುವಂತಾಗುತ್ತದೆ.

ಸುಬ್ಬನಂತಹ ಅನಾಥ ಬಾಲಕನ ಬಗ್ಗೆ ಸಹಾನುಭೂತಿ ಮೂಡಿಸುವ ಮೂಲಕ ಕುವೆಂಪು ಸಾಹಿತ್ಯದ ಮಾನವೀಯ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಕಥೆಯಲ್ಲಿರುವ ದೊಡ್ಡ ಸಾಮಾಜಿಕ ಪ್ರಶ್ನೆ ಎಂದರೆ—ಮನುಷ್ಯನನ್ನು ಮನುಷ್ಯನಾಗಿ ನೋಡುವುದಕ್ಕಿಂತ ಹಣದ ಮೌಲ್ಯದಲ್ಲಿ ನೋಡುವ ಸಮಾಜ ಎಷ್ಟು ಮಾನವೀಯವಾಗಿರಬಹುದು ಎಂಬುದು. ಗೌಡನ ಧಾರ್ಮಿಕ ಆಚರಣೆಗಳಿಗಿಂತ ಸುಬ್ಬನ ನೋವೇ ಇಲ್ಲಿ ನಿಜವಾದ ನೈತಿಕ ಪ್ರಶ್ನೆಯಾಗಿ ಪರಿಣಮಿಸುತ್ತದೆ. ಇದರಿಂದ ಕುವೆಂಪು

ಅವರ ಮಾನವತಾವಾದಿ ದೃಷ್ಟಿಕೋನ ಸ್ಪಷ್ಟವಾಗುತ್ತದೆ. ಮನುಷ್ಯನ ಮೇಲಿನ ಪ್ರೀತಿ ಇಲ್ಲದ ಧರ್ಮ, ಕರುಣೆ ಇಲ್ಲದ ಸಂಪತ್ತು ಮತ್ತು ನ್ಯಾಯವಿಲ್ಲದ ಅಧಿಕಾರಗಳಿಗೆ ಯಾವುದೇ ನೈತಿಕ ಮೌಲ್ಯವಿಲ್ಲ ಎಂಬ ಸಂದೇಶ ಕಥೆಯ ಅಂತರಾಳದಲ್ಲಿದೆ.

"ಸಾಲದ ಮಗು" ಕಥೆ ನಿರೂಪಿಸುವ ಸಾಮಾಜಿಕ ಪರಿಸ್ಥಿತಿಗಳು ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಸೇರಿದವುಗಳಾಗಿದ್ದರೂ ಅದರ ಮೂಲ ಪ್ರಶ್ನೆಗಳು ಇಂದಿಗೂ ಪ್ರಸ್ತುತವಾಗಿವೆ. ಸಾಲದ ಕಾರಣದಿಂದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದು, ಬಡತನದಿಂದ ಮಕ್ಕಳ ಶಿಕ್ಷಣ ಸ್ಥಗಿತಗೊಳ್ಳುವುದು, ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಅನಿವಾರ್ಯತೆ, ಆರ್ಥಿಕ ಅಸಮಾನತೆ ಮತ್ತು ದುರ್ಬಲ ವರ್ಗಗಳ ಶೋಷಣೆ ಮುಂತಾದ ಸಮಸ್ಯೆಗಳು ವಿವಿಧ ರೂಪಗಳಲ್ಲಿ ಇಂದಿಗೂ ಸಮಾಜದಲ್ಲಿ ಕಾಣಿಸಿಕೊಳ್ಳುತ್ತವೆ. ಕಥೆಯ ಮಹತ್ವ ಇಲ್ಲಿಯೇ ಇದೆ. ಅದು ಕೇವಲ ಭೂತಕಾಲದ ಒಂದು ಗ್ರಾಮೀಣ ಘಟನೆಯನ್ನು ದಾಖಲಿಸುವುದಿಲ್ಲ. ಬದಲಾಗಿ ಆರ್ಥಿಕ ಶಕ್ತಿಯ ಅಸಮಾನ ಹಂಚಿಕೆ ಮನುಷ್ಯ ಸಂಬಂಧಗಳನ್ನು ಹೇಗೆ ಬದಲಾಯಿಸುತ್ತದೆ ಎಂಬ ಪ್ರಶ್ನೆಯನ್ನು ಮುಂದಿಡುತ್ತದೆ. ಮಗುವಿನ ಬದುಕು ಕುಟುಂಬದ ಆರ್ಥಿಕ ಪರಿಸ್ಥಿತಿಯ ಮೇಲೆ ಅವಲಂಬಿತವಾಗಬಾರದು ಎಂಬ ನೈತಿಕ ಸಂದೇಶವೂ ಕಥೆಯಲ್ಲಿದೆ. ಇಂದಿನ ಸಂದರ್ಭದಲ್ಲಿ ಮಕ್ಕಳಿಗೆ ಶಿಕ್ಷಣ, ಸುರಕ್ಷತೆ, ಆರೋಗ್ಯ, ಪ್ರೀತಿ ಮತ್ತು ಸ್ವತಂತ್ರ ಬಾಲ್ಯ ದೊರೆಯಬೇಕು ಎಂಬ ಸಾಮಾಜಿಕ ಚಿಂತನೆಗೆ ಈ ಕಥೆ ಸಾಹಿತ್ಯಿಕ ಬೆಂಬಲವನ್ನು ಒದಗಿಸುತ್ತದೆ. ಬಾಲಕಾರ್ಮಿಕತೆಯನ್ನು ಕೇವಲ ಕಾನೂನು ಅಥವಾ ಆರ್ಥಿಕ ಸಮಸ್ಯೆಯಾಗಿ ನೋಡುವುದಕ್ಕಿಂತ ಮಾನವೀಯ ಹಕ್ಕಿನ ಪ್ರಶ್ನೆಯಾಗಿ ನೋಡಬೇಕೆಂಬ ಅರಿವನ್ನು ಈ ಕಥೆ ಮೂಡಿಸುತ್ತದೆ.

**ಉಪಸಂಹಾರ:**

ಕುವೆಂಪು ಅವರ "ಸಾಲದ ಮಗು" ಕಥೆ ಬಡತನ, ಸಾಲ, ಜೀತಪದ್ಧತಿ ಮತ್ತು ಬಾಲಶೋಷಣೆಯಂತಹ ಸಾಮಾಜಿಕ ಸಮಸ್ಯೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುವ ಮಾನವೀಯ ಕಥೆಯಾಗಿದೆ. ಸುಬ್ಬ ಎಂಬ ಎಂಟು–ಹತ್ತು ವರ್ಷದ ಬಾಲಕನ ಬದುಕಿನ ಮೂಲಕ ಒಂದು ಶೋಷಣಾತ್ಮಕ ವ್ಯವಸ್ಥೆಯ ಕ್ರೌರ್ಯವನ್ನು ಕುವೆಂಪು ಅನಾವರಣಗೊಳಿಸಿದ್ದಾರೆ. ತಂದೆಯ ಸಾಲಕ್ಕೆ ಮಗನು ಹೊಣೆಗಾರನಾಗಬೇಕಾದ ಪರಿಸ್ಥಿತಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಮಾನವೀಯ ಘನತೆಯ ನಿರಾಕರಣೆಯಾಗಿದೆ. ಕಥೆಯಲ್ಲಿ ಸಾಲವು ಆರ್ಥಿಕ ವ್ಯವಹಾರದಿಂದ ಸಾಮಾಜಿಕ ಬಂಧನವಾಗಿ ರೂಪಾಂತರಗೊಳ್ಳುತ್ತದೆ. ಗೌಡನಿಗೆ ಸುಬ್ಬ ಮನುಷ್ಯನಲ್ಲ; ಮುನ್ನೂರು ರೂಪಾಯಿಗಳ ಸಾಲಕ್ಕೆ ಪ್ರತಿಯಾಗಿ ದೊರೆತ ಜೀತದಾಳು. ಈ ಮನೋಭಾವವೇ ಅವನ ಬಾಲ್ಯವನ್ನು ಕಸಿದುಕೊಳ್ಳುತ್ತದೆ. ಅವನ ಕನಸುಗಳು ವಾಸ್ತವದ ಕ್ರೌರ್ಯದಿಂದ ನಾಶವಾಗುತ್ತವೆ. ಅನಾರೋಗ್ಯದಲ್ಲಿಯೂ ಕೆಲಸ ಮಾಡಬೇಕಾಗುತ್ತದೆ. ಕೊನೆಗೆ ಭೀಕರ ಮಳೆಗಾಲದ ನಡುರಾತ್ರಿಯಲ್ಲಿ ಜೀವದ ಅಪಾಯವನ್ನು ಎದುರಿಸಿ ಕೆಲಸಕ್ಕೆ ಹೋಗಬೇಕಾಗಿ ಬಂದು ಹಾವಿನ ಕಡಿತದಿಂದ ಸಾವನ್ನಪ್ಪುತ್ತಾನೆ. ಕಥೆಯ ಕೊನೆಯ "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು!" ಎಂಬ ಮಾತು ಕುವೆಂಪು ಅವರ ಸಾಮಾಜಿಕ ವ್ಯಂಗ್ಯದ ಅತ್ಯಂತ ತೀಕ್ಷ್ಣ ಅಭಿವ್ಯಕ್ತಿಯಾಗಿದೆ. ಮಗುವಿನ ಸಾವಿನಲ್ಲಿ ದುಃಖವನ್ನು ಕಾಣಬೇಕಾದ ವ್ಯಕ್ತಿ ಹಣದ ವಸೂಲಿಯನ್ನು ಕಾಣುತ್ತಾನೆ. ಈ ಒಂದು ವಾಕ್ಯ ಮನುಷ್ಯನ ಜೀವಕ್ಕಿಂತ ಹಣಕ್ಕೆ ಹೆಚ್ಚಿನ ಮೌಲ್ಯ ನೀಡುವ ವ್ಯವಸ್ಥೆಯ ನೈತಿಕ ದಿವಾಳಿತನವನ್ನು ಬಯಲಿಗೆಳೆಯುತ್ತದೆ.

ಪ್ರಕೃತಿಯ ರುದ್ರತೆ, ಸುಬ್ಬನ ಅಸಹಾಯಕತೆ, ಗೌಡನ ಕ್ರೌರ್ಯ, ಸಾಲದ ಸಂಕೋಲೆ, ಬಾಲ್ಯದ ಕನಸುಗಳು ಮತ್ತು ಕೊನೆಯ ದಾರುಣ ಅಂತ್ಯ—ಇವೆಲ್ಲವೂ ಒಟ್ಟಾಗಿ "ಸಾಲದ ಮಗು" ಕಥೆಯನ್ನು ಸಾಮಾಜಿಕ ವಾಸ್ತವವಾದಿ ಹಾಗೂ ಮಾನವೀಯ ದೃಷ್ಟಿಯಿಂದ ಮಹತ್ವದ ಕಥೆಯನ್ನಾಗಿ ರೂಪಿಸುತ್ತವೆ. ಕಥೆಯ ನಿಜವಾದ ಸಂದೇಶವು ಸಾಲದ ವಿರುದ್ಧ ಮಾತ್ರವಲ್ಲ; ಮನುಷ್ಯನನ್ನು ಹಣದ ಮೌಲ್ಯಕ್ಕೆ ಇಳಿಸುವ ಪ್ರತಿಯೊಂದು ಶೋಷಣಾತ್ಮಕ ಮನೋಭಾವದ ವಿರುದ್ಧವಾಗಿದೆ. ಮಗುವಿನ ಬದುಕು ಯಾವುದೇ ಸಾಲದ ಪರಿಹಾರವಾಗಲು ಸಾಧ್ಯವಿಲ್ಲ ಎಂಬ ಮಾನವೀಯ ಸತ್ಯವೇ ಈ ಕಥೆಯ ಅಂತರಾಳದಲ್ಲಿದೆ. ಆದ್ದರಿಂದ "ಸಾಲದ ಮಗು" ಕುವೆಂಪು ಅವರ ಮಾನವೀಯ ಚಿಂತನೆ, ಸಾಮಾಜಿಕ ಪ್ರಜ್ಞೆ ಮತ್ತು ಕಥನಕಲೆಯ ಸಮರ್ಥ ಸಂಯೋಜನೆಯಾಗಿ ಕನ್ನಡ ಕಥಾಸಾಹಿತ್ಯದಲ್ಲಿ ಗಮನಾರ್ಹ ಸ್ಥಾನವನ್ನು ಪಡೆದುಕೊಳ್ಳುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಕುವೆಂಪು, ನನ್ನ ದೇವರು ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ಮೈಸೂರು, 2014.
2. ಸುಜನಾ, ಪರಂಪರೆ ಮತ್ತು ಕುವೆಂಪು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2011
3. ಅರವಿಂದ ಮಾಲಗತ್ತಿ, (ಸಂ), ಕುವೆಂಪು ಕೃತಿ ವಿಮರ್ಶೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2006
4. ಕೃಷ್ಣಕುಮಾರ್ ಸಿ.ಪಿ., ಕುವೆಂಪು ಸಾಹಿತ್ಯ ಸಂಧಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1995
5. ಅಂಬಳಿಕೆ ಹಿರಿಯಣ್ಣ ನೀಲಗಿರಿ ತಳವಾರ, ಕುವೆಂಪು: ಪುನರ್ಮನನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2004
6. ಚೆನ್ನಬಸಪ್ಪ ಕೋ., ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ- ಸಾಮಾಜಿಕ ನಿಷ್ಠೆ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, 2006
7. ಶಿವರುದ್ರಪ್ಪ ಜಿ.ಎಸ್., (ಸಂ), ಶ್ರೀ ಕುವೆಂಪು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1991
8. ಶಿವಾರೆಡ್ಡಿ ಕೆ.ಸಿ., ಸೋಮಶೇಖರ್ ಎಸ್.ವೈ., ಕುವೆಂಪು ವಿಚಾರಧಾರೆಯ ಪ್ರಸ್ತುತತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004

**Citation:** ಡಾ. ಕೃಷ್ಣಪ್ಪ ಕೆ.ಎನ್., 2026. **"ಕುವೆಂಪು ಅವರ "ಸಾಲದ ಮಗು" ಕಥೆಯಲ್ಲಿ ಸಾಮಾಜಿಕ ಶೋಷಣೆ ಮತ್ತು ಮಾನವೀಯ ಮೌಲ್ಯಗಳ ಸಂಘರ್ಷ"**. International Journal of Academic Research, 13(3): 97-104.

**Copyright:** ©2026 ಡಾ. ಕೃಷ್ಣಪ್ಪ ಕೆ.ಎನ್. This is an open-access article distributed under the terms of the Creative Commons Attribution License (https://creativecommons.org/ licenses/by/4.0/), which permits unrestricted use, distribution, and reproduction in any medium, provided the original author and source are credited.